**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**<u>ಸಿ.ಸಿ. ಸಂಖ್ಯೆಃ 4419/2022</u>**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : **ಎ 1.** ರಫೀಕ್ ಅಹಮದ್
ತಂದೆ - ಬಾಬಜಾನ್,
ಸುಮಾರು **38** ವರ್ಷ ವಯಸ್ಸು,

**ಎ 2. ಬಾಬಜಾನ್(ಮೃತಪಟ್ಟಿರುತ್ತಾರೆ)**

**ಎ 3.** ಫರ್ವಿನ್
ಗಂಡ - ಬಾಬಜಾನ್,
ಸುಮಾರು **55** ವರ್ಷ ವಯಸ್ಸು,

ಎ **1** ರಿಂದ ಎ **3** ವಾಸಃ
ದಲ್ಲಾಳು ಕೊಪ್ಪಲು ಗ್ರಾಮ,
ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

**ಎ 4.** ಸುಮುನ್ ಪಾಷ,
ತಂದೆ - ಅಬ್ದುಲ್ ಖಾದರ್,
ಸುಮಾರು **50** ವರ್ಷ ವಯಸ್ಸು,

**ಎ 5.** ನವೀದ್ ಬಾನು,
ಗಂಡ - ಸುಮುನ್ ಪಾಷ,
ಸುಮಾರು **45** ವರ್ಷ ವಯಸ್ಸು,
ಎ **4** ಮತ್ತು ಎ **5** ವಾಸಃ
ನಂ.**1053/1**, ಉಸ್ಮಾನಿಯ ಬ್ಲಾಕ್,
ಕೆ ಎನ್ ಪುರ, ಮೈಸೂರು ಸಿಟಿ,
ಮೈಸೂರು ಜಿಲ್ಲೆ.

## ದೋಷಾರೋಪಣೆ

ಶ್ರೀಮತಿ ನಮ್ರತಾ ಎಸ್. ಹೊಸಮಠ, ಬಿ.ಎ., ಎಲ್.ಎಲ್.ಬಿ., 1 ನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

1. ದಿನಾಂಕ 04.07.2021 ರಂದು ಮಧ್ಯಾಹ್ನ 3.30 ಗಂಟೆ ಸಮಯದಲ್ಲಿ ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ, ಹುಣಸೂರು ತಾಲ್ಲೂಕು ಬಿಳಿಕೆರೆ ಗ್ರಾಮದ ಮಧು ಬಡಾವಣೆಯಲ್ಲಿರುವ ರಾಜೇಗೌಡರವರಿಗೆ ಸೇರಿದ ಖಾಲಿ ನಿವೇಶನದಲ್ಲಿ 1 ನೇ ಆರೋಪಿಯಾದ ನೀವು ಅಪರಾಧ ಮಾಡುವ ಉದ್ದೇಶವುಳ್ಳವರಾಗಿ ಇನ್ನೂ 15 ವರ್ಷದ ಅಪ್ರಾಪ್ತ ವಯಸ್ಸಿನ ಸಾಕ್ಷಿ-2 ಫಿಜಾ ಅಂಜುಮ್ ರವರನ್ನು ಬಾಲ್ಯ ವಿವಾಹವಾಗಿರುತ್ತೀರೆಂದು, ಆ ಮೂಲಕ ಬಾಲ್ಯ ವಿವಾಹ ನಿಷೇಧ ಕಾಯ್ದೆ ಕಲಂ 9 ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 2 ರಿಂದ 5 ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಉದ್ದೇಶವುಳ್ಳವರಾಗಿ, ಬಾಲ್ಯ ವಿವಾಹ ನಿಷೇದ ಕಾಯ್ದೆ ಜಾರಿಯಲ್ಲಿರುವುದು ಗೊತ್ತಿದ್ದರೂ ಸಹ 2 ರಿಂದ 5 ನೇ ಆರೋಪಿಯಾದ ನೀವು 15

ವರ್ಷದ ಅಪ್ರಾಪ್ತ ವಯಸ್ಸಿನ ಸಾಕ್ಷಿ-2 ಫಿಜಾ ಅಂಜುಮ್ ರವರನ್ನು 1 ನೇ ಆರೋಪಿಯೊಂದಿಗೆ ಬಾಲ್ಯ ವಿವಾಹವನ್ನು ಮಾಡಿಸಿರುತ್ತೀರಿ, ಆ ಮೂಲಕ ಬಾಲ್ಯ ವಿವಾಹ ನಿಷೇದ ಕಾಯ್ದೆ ಕಲಂ 11 ರ ರೀತ್ಯಾ ದಂಡನೀಯ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರುತಾ ಎಸ್. ಹೊಸಮಠ)**

ದಿನಾಂಕಃ **22.12.2025**

**1** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.